**ಉ) ವಿಷಯ: ರಾಜ್ಯದ ಸುತ್ತ ಇರುವ ರಾಜ್ಯಗಳಾದ ಮಹಾರಾಷ್ಟ್ರ, ಆಂಧ್ರಪ್ರದೇಶ, ತಮಿಳುನಾಡು, ಕೇರಳ ಮತ್ತು ಗೋವಾ ಗಡಿ ಭಾಗಗಳಲ್ಲಿ ಉಳಿದಿರುವ ಕನ್ನಡಿಗರ ಮೂಲಭೂತ ಸಮಸ್ಯೆಗಳ ಕುರಿತು.**

**ಶ್ರೀ ಚಂದ್ರಕಾಂತ್ ಬೆಲ್ಲದ (ಹುಬ್ಬಳ್ಳಿ-ಧಾರವಾಡ (ಪಶ್ಚಿಮ)** :- ಮಾನ್ಯ ಅಧ್ಯಕ್ಷರೆ, ರಾಜ್ಯದ ಸುತ್ತ ಇರುವ ಮಹಾರಾಷ್ಟ್ರ, ಆಂಧ್ರಪ್ರದೇಶ, ತಮಿಳುನಾಡು, ಕೇರಳ ಮತ್ತು ಗೋವಾ ಗಡಿ ಭಾಗಗಳಲ್ಲಿ ಉಳಿದಿರುವ ಕನ್ನಡಿಗರ ಮೂಲಭೂತ ಸಮಸ್ಯೆಗಳಾದ ಪ್ರಾಥಮಿಕ ಶಿಕ್ಷಣ, ಉದ್ಯೋಗ, ವ್ಯಾಪಾರ, ಉದ್ದಿಮೆಗಳ ಬಗ್ಗೆ, ಅಭಿವೃದ್ಧಿ ಬಗ್ಗೆ ಕ್ರಮ ಕೈಗೊಳ್ಳಲು ಮಾನ್ಯ ಮುಖ್ಯಮಂತ್ರಿಯವರ ಗಮನ ಸೆಳೆಯುತ್ತೇನೆ.

**ಶ್ರೀ ಎಸ್. ಸುರೇಶ್‌ಕುಮಾರ್ (ಕಾನೂನು, ಸಂಸದೀಯ ವ್ಯವಹಾರಗಳ ಸಚಿವರು)(ಮಾನ್ಯ ಮುಖ್ಯಮಂತ್ರಿಯವರ ಪರವಾಗಿ)** :- ಮಾನ್ಯ ಅಧ್ಯಕ್ಷರೆ,

**(ಸಚಿವರ ಲಿಖಿತ ಹೇಳಿಕೆಯನ್ನು ಲಗತ್ತಿಸಲಾಗಿದೆ)**

**ಶ್ರೀ ಚಂದ್ರಕಾಂತ್ ಬೆಲ್ಲದ ಮಾನ್ಯ ವಿಧಾನ ಸಭಾ ಸದಸ್ಯರು ನಿಯಮ 73-ರ ಅಡಿಯಲ್ಲಿ ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ** :

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲಿ ಗಡಿ ಭಾಗದ ಕನ್ನಡಿಗರ ಶ್ರೇಯೋಭಿವೃದ್ಧಿಗಾಗಿ ಈ ಕೆಳಕಂಡ ಯೋಜನೆಗಳನ್ನು ರೂಪಿಸಿ, ಅನುಷ್ಠಾನಗೊಳಿಸಲಾಗಿದೆ.

ರಾಜ್ಯದ ಗಡಿ ಭಾಗದ ಕನ್ನಡಿಗರಲ್ಲಿ ನಾಡು-ನುಡಿಯ ಪ್ರೇಮವನ್ನು ಜಾಗೃತಗೊಳಿಸಿ ಅವರನ್ನು ಮುಖ್ಯ ವಾಹಿನಿಯಲ್ಲಿ ಒಂದಾಗಿ ಸಾಗುವಂತೆ ಮಾಡುವ ಉದ್ದೇಶದಿಂದ ಗಡಿ ನಾಡು ಉತ್ಸವವನ್ನು ಇಲಾಖೆಯಿಂದ ಆಚರಿಸಲಾಗುತ್ತಿದೆ. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸಹಯೋಗದೊಂದಿಗೆ ಕನ್ನಡ ಜಾಗೃತಿ ಸಮಾವೇಶವನ್ನು 52 ಗಡಿ ತಾಲ್ಲೂಕುಗಳಲ್ಲಿ ಏರ್ಪಡಿಸಲಾಗುತ್ತದೆ. ಸುವರ್ಣ ಕರ್ನಾಟಕ ವರ್ಷದ ಪ್ರಯುಕ್ತ ರಾಜ್ಯದ 52 ಗಡಿ ತಾಲ್ಲೂಕುಗಳಲ್ಲಿ ಕನ್ನಡ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿ ಬಿಂಬಿಸುವಂತಹ ಗಡಿ ಗ್ರಾಮೀಣ ಪ್ರದೇಶಗಳಲ್ಲಿ ಸುವರ್ಣ ಭಾವೈಕ್ಯತೆ, ಸಂಸ್ಕೃತಿ-ಸಂಭ್ರಮ ಎಂಬ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿರುತ್ತದೆ.

ಪ್ರಸ್ತುತ ಸಾಲಿನಲ್ಲಿ ರಾಜ್ಯದ ಗಡಿ ಜಿಲ್ಲೆಯಾದ ಬೆಳಗಾವಿಯಲ್ಲಿ ವಿಶ್ವ ಕನ್ನಡ ಸಮ್ಮೇಳನವನ್ನು ಆಚರಿಸಲು ರಾಜ್ಯ ಸರ್ಕಾರವು 25.00 ಕೋಟಿ ರೂಪಾಯಿಗಳನ್ನು ನಿಗಧಿಪಡಿಸಿದೆ. 2008-09ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಿಸಿರುವಂತೆ ಗಡಿನಾಡಿನ ಮುಖ್ಯ ಕೇಂದ್ರಗಳಾದ ಬೆಳಗಾವಿ ಜಿಲ್ಲೆಯ ಅಥಣಿ, ಕೋಲಾರ ಜಿಲ್ಲೆಯ ಅಂತರಗಂಗೆ, ಗುಲ್ಬರ್ಗಾ ಜಿಲ್ಲೆಯ ಸೇಡಂ ಹಾಗೂ ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ಈ ನಾಲ್ಕು ಪ್ರದೇಶಗಳಲ್ಲಿ ಸುವರ್ಣ ಭವನಗಳನ್ನು ನಿರ್ಮಿಸಲು ತಲಾ ರೂ. 1.25 ಕೋಟಿ ನಂತೆ ಒಟ್ಟು ರೂ.5.00 ಗಳನ್ನು ಅನುದಾನವಾಗಿ ದಿನಾಂಕ : 09-09-2008 ರಂತೆ ಮಂಜೂರು ಮಾಡಿದೆ.

ರಾಜ್ಯದ 52 ಗಡಿ ತಾಲ್ಲೂಕುಗಳಲ್ಲಿ ಗಡಿ ಕನ್ನಡ ಭವನ ನಿರ್ಮಿಸಲು ನಿರ್ಧರಿಸಲಾಗಿದ್ದು, ಈಗಾಗಲೇ ರಾಜ್ಯದ 5 ಗಡಿ ಭಾಗಗಳಲ್ಲಿ ಗಡಿ ಕನ್ನಡ ಭವನಗಳನ್ನು ನಿರ್ಮಾಣ ಮಾಡಲು ಕ್ರಮ ಕೈಗೊಳ್ಳಲಾಗಿದೆ. ಬೆಳಗಾವಿ ಜಿಲ್ಲೆಯ ವಡಗಾಂವ್, ಬಿಜಾಪುರ ಜಿಲ್ಲೆಯ ಇಂಚಗೇರಿ, ಕೋಲಾರ ಜಿಲ್ಲೆಯ ಮುಳಬಾಗಿಲು, ದಕ್ಷಿಣ ಕನ್ನಡ ಜಿಲ್ಲೆಯ ಉಳ್ಳಾಲ, ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆಯಲ್ಲಿ ಗಡಿ ಭವನ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಲಾಗಿದೆ. ಉಳಿದ 47 ಸ್ಥಳಗಳಲ್ಲಿ ಗಡಿ ಭವನ ನಿರ್ಮಿಸಲು ಹಂತ ಹಂತವಾಗಿ ಕ್ರಮ ಕೈಗೊಳ್ಳಲಾಗುವುದು.

**ಶ್ರೀ ಚಂದ್ರಕಾಂತ್ ಬೆಲ್ಲದ** :- ಮಾನ್ಯ ಅಧ್ಯಕ್ಷರೆ, ಸರ್ಕಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮೂಲಕ ಕೆಲವು ಯೋಜನೆಗಳನ್ನು ಇಟ್ಟುಕೊಂಡು ಈ ಕಾರ್ಯಕ್ರಮಗಳನ್ನು ಮಾಡುವ ದೃಷ್ಟಿಯಲ್ಲಿ ತಮ್ಮ ಕೆಲವು ಕಾರ್ಯಕ್ರಮಗಳು ಮತ್ತು ಅನುಷ್ಠಾನ ಮಾಡಬೇಕಾದಂಥ ಕೆಲವು ಕೆಲಸ ಕಾರ್ಯಗಳ ಬಗ್ಗೆ ಈಗ ನನ್ನ ಮುಂದೆ ಮಂತ್ರಿಗಳು ಲಿಖಿತ ಉತ್ತರವನ್ನು ಓದಿದ್ದಾರೆ. ಇದೆಲ್ಲ ಸರಿ. ಆದರೆ, ನಮ್ಮ ಕನ್ನಡ ಶಾಲೆಗಳ ಗಡಿ ಈಚೆಗೆ ನೀವು ಹೇಳುತ್ತಿದ್ದೀರಿ. ನಮ್ಮ ಭಾಗದಲ್ಲಿರುವ ಗಡಿ ಪ್ರದೇಶಗಳ ಬೆಳವಣಿಗೆಗೆ ತಾವು ಹೆಚ್ಚಿನ ಒತ್ತು ಕೊಟ್ಟಿದ್ದೀರಿ. ಕರ್ನಾಟಕದಲ್ಲಿ ಸಮುಚ್ಚಯ ಮತ್ತು ಸಮುದಾಯ ಭವನ, ಕನ್ನಡ ಭವನಗಳನ್ನು ನಿರ್ಮಾಣ ಮಾಡುವುದು, ಸಾಂಸ್ಕೃತಿಕ ಭವನ ನಿರ್ಮಾಣ ಮಾಡುವುದು ಇವೆಲ್ಲ ಸರಿ. ಆದರೆ, ಗಡಿಭಾಗದಲ್ಲಿರುವ 52 ತಾಲ್ಲೂಕುಗಳ ಸ್ಥಿತಿಗತಿ ಏನು? ಇವುಗಳಿಗೆ ಹೆಚ್ಚು ಮಹತ್ವ ಕೊಡಬೇಕಾಗಿರುವುದು ಬಹಳ ಮುಖ್ಯವಾದದ್ದು. ಕನ್ನಡ ಶಾಲೆಗೆ ಬೇಕಾದಂಥ ಕೊಠಡಿಗಳ ಸಂಖ್ಯೆ ಎಷ್ಟಿದೆ ಎನ್ನುವುದು ಬಹಳ ಮುಖ್ಯ. ಕನ್ನಡ ಶಾಲೆಗಳಲ್ಲಿ ಇರುವ ಶಿಕ್ಷಕರ ಕೊರತೆಯೂ ಕೂಡ ಬಹಳ ಮುಖ್ಯವಾಗಿರುತ್ತದೆ. ಗಡಿ ಈಚೆ ಗಡಿ ಒಳಗಡೆ ಪ್ರದೇಶದಲ್ಲಿರುವಂಥ

ಕನ್ನಡ ಶಾಲೆಗಳಿಗೆ, ಪ್ರೌಢ ಶಾಲೆಗಳಿಗೆ, ಕಾಲೇಜುಗಳಿಗೆ ಶಿಕ್ಷಕರನ್ನು ಕೊಡಬೇಕಾದದ್ದು, ಕೊಠಡಿಗಳನ್ನು ಕೊಡಬೇಕಾದದ್ದು ಬಹಳ ಮುಖ್ಯವಾದ ಕಾರ್ಯವಾಗಿದೆ. ಇದರ ಜೊತೆಗೆ ತಾವು ಗಡಿ ಭಾಗದಲ್ಲಿರುವಂಥ ಎಲ್ಲಾ 52 ತಾಲ್ಲೂಕುಗಳಲ್ಲಿ ಗ್ರಂಥಾಲಯ ಕಟ್ಟಡಗಳನ್ನು ಕಟ್ಟಬೇಕು. ಎಲ್ಲಾ ಕನ್ನಡ ಪತ್ರಿಕೆಗಳು ಅಲ್ಲಿ ಸಿಗಬೇಕು. ಸಾಕಷ್ಟು ಕನ್ನಡ ಸಾಹಿತ್ಯವೂ ಸಿಗುವಂಥ ಗ್ರಂಥಾಲಯಗಳನ್ನು ಅಲ್ಲಿ ಸ್ಥಾಪಿಸಬೇಕು. 52 ತಾಲ್ಲೂಕುಗಳಲ್ಲಿ ಗಡಿಯ ಒಳಗಡೆ ಇರುವಂಥ ಪ್ರದೇಶಗಳಲ್ಲಿ ಇನ್ನೂ ಹೆಚ್ಚು ಮಹತ್ವ ಕೊಡಬೇಕಾಗಿತ್ತು. ಗಡಿ ಆಚೆಯಲ್ಲಿರುವ ಭಾಷಾವಾರು ಪ್ರಾಂತ್ಯಗಳನ್ನು ರಚನೆ ಮಾಡಿದ ಮೇಲೆ ಗಡಿ ಆಚೆ ಇರುವುದರಿಂದ ಕೇಂದ್ರ ಸರ್ಕಾರ ನಮ್ಮ ಎಷ್ಟೋ ಭಾಗಗಳ ಬಗ್ಗೆ ಇನ್ನೂ ಸರಿಯಾದ ನಿರ್ಧಾರ ತೆಗೆದುಕೊಳ್ಳದಿರುವುದರಿಂದ ಇವತ್ತೂ ಕನ್ನಡಿಗರು ಆ ಪ್ರದೇಶದಲ್ಲಿದ್ದಾರೆ, ಬೇರೆ ಬೇರೆ ರಾಜ್ಯಗಳಲ್ಲಿದ್ದಾರೆ. ಬೇರೆ ಬೇರೆ ರಾಜ್ಯಗಳಲ್ಲಿರುವಂಥ ಕನ್ನಡಿಗರಿಗೆ, ಕನ್ನಡ ಭಾಷೆ ಅಭ್ಯಾಸ ಮಾಡುವವರಿಗೆ ಅಲ್ಲಿ ಸರಿಯಾದ ಕನ್ನಡ ಶಾಲೆಗಳು ಇಲ್ಲ.

**ಅಧ್ಯಕ್ಷರು** :- ತಾವು specific ಆಗಿ ಸಲಹೆಗಳನ್ನು ನೀಡಿ.

**ಶ್ರೀ ಚಂದ್ರಕಾಂತ್ ಬೆಲ್ಲದ** :- ಮಹಾರಾಷ್ಟ್ರ, ಆಂಧ್ರ, ತಮಿಳುನಾಡು, ಕೇರಳ, ಗೋವಾದಲ್ಲಿರಬೇಕಾದಂಥ ಕನ್ನಡ ಶಾಲೆಗಳ ಬಗ್ಗೆ ಇನ್ನೂ ಹೆಚ್ಚಿನ ಗಮನ ಕೊಡಬೇಕಾಗಿದೆ. ಆ ಶಾಲೆಗಳ ಬಗ್ಗೆ ರಾಜ್ಯ ಸರ್ಕಾರ, ಕೇಂದ್ರ ಸರ್ಕಾರದ ಮೂಲಕವಾಗಲಿ ಅಥವಾ ಆ ರಾಜ್ಯಗಳಿಗೆ ಪತ್ರ ಬರೆದು ಅಲ್ಲಿರುವಂಥ ಕನ್ನಡ ಶಾಲೆಗಳಿಗೆ ಹೆಚ್ಚಿನ ಶಿಕ್ಷಕರನ್ನು ನೇಮಕ ಮಾಡಬೇಕು. ನಿವೃತ್ತ ಶಿಕ್ಷಕರನ್ನೂ ಅಲ್ಲಿಗೆ ಭರ್ತಿ ಮಾಡಿಲ್ಲ ಅಥವಾ ಅಲ್ಲಿಯ ಮಕ್ಕಳಿಗೆ ಸರಿಯಾದ ಶಾಲಾ ಕೊಠಡಿಗಳಿಲ್ಲ. ತಾವು ಗಡಿ ಆಚೆಗಿನ ಬಗ್ಗೆ ಹೆಚ್ಚು ಲಕ್ಷ್ಯ ಕೊಡಬೇಕಾಗಿತ್ತು. ಭಾಷಾವಾರು ಪ್ರಾಂತ್ಯಗಳನ್ನು ಮಾಡಿ ಎಷ್ಟೋ ಆಯೋಗಗಳನ್ನು ಮಾಡಿದರೂ ಕೇಂದ್ರ ಸರ್ಕಾರ ಅವುಗಳ ಬಗ್ಗೆ ಇದುವರೆಗೆ ಸರಿಯಾದ ಕ್ರಮ ತೆಗೆದುಕೊಂಡಿಲ್ಲ. ನಮ್ಮ ಕನ್ನಡಿಗರೂ ಅಲ್ಲಿದ್ದಾರೆ. ಇದನ್ನು ಅವರ ಬೆಳವಣಿಗೆಗೆ ಮಾಡಬೇಕು. ಆಯಾ ಸರ್ಕಾರಗಳಿಗೆ, ಕೇಂದ್ರ ಸರ್ಕಾರಕ್ಕೆ ಪತ್ರ ಬರೆದು ಅಲ್ಲಿರುವಂಥ ಕನ್ನಡಿಗರಿಗೆ, ಕನ್ನಡ ಭಾಷಾ ಬೆಳವಣಿಗೆಗೆ, ಶಿಕ್ಷಣಕ್ಕೆ ಆದ್ಯತೆ ಕೊಡಬೇಕು. ಪ್ರೌಢ ಶಾಲೆ, ಕಾಲೇಜು ಆಗಬೇಕು. ಅಲ್ಲಿರುವ ಕನ್ನಡ ಸಂಘಟನೆಗಳಿಗೆ ಹೆಚ್ಚಿನ ಆದ್ಯತೆ ಕೊಡಿ. ಗಡಿ ಆಚೆ ಇರುವ ಪ್ರದೇಶಗಳಲ್ಲಿ ಕನ್ನಡ ಭವನಗಳನ್ನು ಅಥವಾ ಸಾಂಸ್ಕೃತಿಕ ಭವನಗಳನ್ನು

ಕನ್ನಡಿಗರಿಗೆ ಕಟ್ಟಿಸಿಕೊಡಿ. ಅಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುವಂತೆ ನೋಡಿಕೊಳ್ಳಿ. ಅಲ್ಲಿ ಜಾನಪದವಾಗಲಿ, ನಾಟಕವಾಗಲಿ ಇವೆಲ್ಲ ಸಾಂಸ್ಕೃತಿಕ ಕಾರ್ಯಕ್ರಮಗಳು ಅಲ್ಲಿ ನಡೆಯುವಂತೆ ನೋಡಿಕೊಳ್ಳಿ. ಅಲ್ಲಿ ಅವರಿಗೆ ಪಠ್ಯ ಪುಸ್ತಕಗಳು ಸಿಗುತ್ತಿಲ್ಲ. ಇವೆಲ್ಲವುಗಳ ಬಗ್ಗೆ ಹೆಚ್ಚು ಅಗತ್ಯ ಕ್ರಮ ತೆಗೆದುಕೊಳ್ಳುವುದು ಬಹಳ ಅವಶ್ಯವಾಗಿದೆ. ಆ ದಿಶೆಯಲ್ಲಿ ಗಡಿ ಆಚೆಯ ಪ್ರದೇಶಗಳ ಬಗ್ಗೆ ಮತ್ತು ಗಡಿ ಈಚಿನ ಪ್ರದೇಶಗಳ ಬಗ್ಗೆ ಕನ್ನಡಿಗರ ಸಂರಕ್ಷಣೆ ಮಾಡಲಿಕ್ಕೆ, ಬೆಳವಣಿಗೆ ಮಾಡಲಿಕ್ಕೆ, ಅಭಿವೃದ್ಧಿಗಾಗಿ ಏನು ಕ್ರಮ ತೆಗೆದುಕೊಳ್ಳುತ್ತೀರಿ?

**ಶ್ರೀ ಎನ್. ಸಂಪಂಗಿ** :- ಮಾನ್ಯ ಅಧ್ಯಕ್ಷರೆ,

**ಅಧ್ಯಕ್ಷರು** :- ನೀವು ಬೇರೆ ರೂಪದಲ್ಲಿ ನೋಟೀಸ್ ಕೊಡಿ. ನಾನು ದೀರ್ಘವಾಗಿ ಚರ್ಚೆ ಮಾಡಲಿಕ್ಕೆ ಅವಕಾಶ ಕೊಡುತ್ತೇನೆ. ಎಲ್ಲಾ ಗಡಿ ಪ್ರದೇಶದಲ್ಲಿ ಶಾಸಕರಿದ್ದಾರೆ. ಇಲ್ಲವೆಂದು ಹೇಳುವುದಿಲ್ಲ. ಇದರ ಬಗ್ಗೆ ಚರ್ಚೆ ಮಾಡಲಿಕ್ಕೆ ಬಿಟ್ಟರೆ ಒಂದು ದಿವಸ ಬೇಕಾಗುತ್ತದೆ. ನಾನು ಚರ್ಚೆ ಮಾಡಲಿಕ್ಕೆ ಅವಕಾಶ ಕೊಡುವುದಿಲ್ಲವೆಂದು ಹೇಳುವುದಿಲ್ಲ.

**ಶ್ರೀ ಎನ್. ಸಂಪಂಗಿ** :- ಇಲ್ಲಿ ಕೋಲಾರ ಜಿಲ್ಲೆ ಎಂದು ಇದೆ.

**ಅಧ್ಯಕ್ಷರು** :- ಇರಬಹುದು. ಗಮನ ಸೆಳೆಯುವ ಸೂಚನೆಯಲ್ಲಿ ಕೇಳಿದ ಸದಸ್ಯರಿಗೆ ಮಾತ್ರ ಸೀಮಿತವಾಗಿರುತ್ತದೆ. ನೀವೆಲ್ಲರೂ ಬಯಸಿದರೆ ಬೇರೆ ರೂಪದಲ್ಲಿ ಅವಕಾಶ ಕೊಡುತ್ತೇನೆ.

**ಶ್ರೀ ಎಸ್. ಸುರೇಶ್ ಕುಮಾರ್** :- ಮಾನ್ಯ ಅಧ್ಯಕ್ಷರೆ, ಹಿರಿಯ ಸದಸ್ಯರಾದ ಚಂದ್ರಕಾಂತ್ ಬೆಲ್ಲದರವರು ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ವಿಶೇಷವಾಗಿ ಗಡಿಭಾಗದಲ್ಲಿರುವ ಕನ್ನಡಿಗರ, ಕನ್ನಡ ಭಾಷೆಯ ಬೆಳವಣಿಗೆಗೋಸ್ಕರ, ಅದಕ್ಕೆ ಶಕ್ತಿ ಕೊಡುವುದಕ್ಕೋಸ್ಕರ ಸರ್ಕಾರ ಇದನ್ನೆಲ್ಲ ಬಹಳ ಸಹಾನುಭೂತಿಯಿಂದ ಪರಿಶೀಲಿಸುತ್ತದೆ. ಕನ್ನಡ ಶಾಲೆಗಳ ಬಗ್ಗೆ ಅವರು ಹೇಳಿದ್ದಾರೆ. ಶಿಕ್ಷಣ ಇಲಾಖೆಯ ಕಡೆಯಿಂದ ಗಡಿ ಭಾಗದಲ್ಲಿರುವ ಕನ್ನಡ ಶಾಲೆಗಳಿಗೆ ಶಿಕ್ಷಕರನ್ನು ಒದಗಿಸುವುದು, ಕಟ್ಟಡಗಳನ್ನು ಒದಗಿಸುವ ಬಗ್ಗೆ ನಾವು ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳುತ್ತೇನೆ.

**ಶ್ರೀ ಚಂದ್ರಕಾಂತ್ ಬೆಲ್ಲದ** :- ಗ್ರಂಥಾಲಯಗಳನ್ನು ಗಡಿ ಒಳಗೆ ಮತ್ತು ಹೊರಗಡೆ ಇರುವ ಪ್ರದೇಶಗಳಲ್ಲಿ ಮಾಡಿ.

**ಅಧ್ಯಕ್ಷರು :-** ಜಯಚಂದ್ರರವರೇ, ರೂಲ್ 69 ಮೇಲೆ ಚರ್ಚೆಯನ್ನು ತಾವು ಮುಂದುವರಿಸುತ್ತೀರೋ ಅಥವಾ ವಿರೋಧ ಪಕ್ಷದ ನಾಯಕರು ಮುಂದುವರಿಸುತ್ತಾರೋ? (ಗೊಂದಲ) ಕರೆಸೋಣ. ಸುರೇಶ್‌ಕುಮಾರ್‌ರವರೆ, ಸಂಬಂಧಪಟ್ಟ ಸಚಿವರನ್ನು ಬರಬೇಕೆಂದು ಹೇಳಿ. (ಗೊಂದಲ) ಕರೆಸುತ್ತಾರೆ.

**ಶ್ರೀ ಶ್ರೀಕಾಂತ ಕುಲಕರ್ಣಿ :-** ನೀರಾವರಿ ಬಗ್ಗೆ. . . .

**ಅಧ್ಯಕ್ಷರು :-** ಆಯಿತು. ಇದಾದ ಮೇಲೆ ತೆಗೆದುಕೊಳ್ಳುತ್ತೇನೆ. ನಿಮ್ಮದು subject ಇದೆ. ಇದಾದ ಮೇಲೆ ತೆಗೆದುಕೊಳ್ಳುತ್ತೇನೆ. ಗಣಿಗಾರಿಕೆ ವಿಷಯ ಪ್ರಸ್ತಾಪವಾದಾಗ agenda ದಲ್ಲಿ ತೆಗೆದುಕೊಳ್ಳುತ್ತೇನೆಂದು ಹೇಳಿದ್ದೇನೆ, ಇದಾದಮೇಲೆ ನಿಮ್ಮ subject ಅನ್ನು ತೆಗೆದುಕೊಳ್ಳುತ್ತೇನೆ.

**ಶ್ರೀ ಶ್ರೀಕಾಂತ ಕುಲಕರ್ಣಿ :-** ಉತ್ತರ ಕರ್ನಾಟಕದ ಜ್ವಲಂತ ಸಮಸ್ಯೆ ಇದೆ.

**ಅಧ್ಯಕ್ಷರು :-** ಅವಕಾಶ ಕೊಡುತ್ತೇನೆ. ಅದಕ್ಕೆ ಇವತ್ತಿನ agenda ದಲ್ಲಿಟ್ಟಿದ್ದೇನೆ. ಆದ್ಯತೆ ಕೊಡುತ್ತೇನೆ. ಇದಾದ ತಕ್ಷಣ ಕೊಡುತ್ತೇನೆ. ಮುಖ್ಯಮಂತ್ರಿಯವರು ವಿಧಾನ ಪರಿಷತ್ತಿನಲ್ಲಿದ್ದಾರೆ. ಇದೇ ವಿಷಯದ ಬಗ್ಗೆ ಅಲ್ಲಿ ಚರ್ಚೆ ನಡೆಯುತ್ತಿದೆ. ಅವರು ಬರುತ್ತಾರೆ. ನೀವು ಪ್ರಾರಂಭ ಮಾಡಿ.

## 5. ನಿಯಮ 69ರ ಮೇರೆಗೆ ಚರ್ಚೆ

**ವಿಷಯ: ರಾಜ್ಯದ ಬಳ್ಳಾರಿ ಹಾಗೂ ಇತರ ಪ್ರದೇಶಗಳಲ್ಲಿ ನಡೆದಿರುವ ಅಕ್ರಮ ಗಣಿಗಾರಿಕೆ ಮತ್ತು ಗಡಿ ಒತ್ತುವರಿ ಪ್ರಕರಣಗಳನ್ನು ತನಿಖೆಗೆ ಒಳಪಡಿಸಿ ರಾಜ್ಯದ ಸಂಪತ್ತನ್ನು ರಕ್ಷಿಸಿ, ತಪ್ಪಿತಸ್ಥರ ಮೇಲೆ ಕ್ರಮ ಕೈಗೊಳ್ಳಬೇಕೆಂಬ ವಿಚಾರದಲ್ಲಿ ನೀಡಿರುವ ಸೂಚನೆ ಕುರಿತು.**

**ಶ್ರೀ ಟಿ.ಬಿ. ಜಯಚಂದ್ರ (ಶಿರಾ) :-** ರಾಜ್ಯದಲ್ಲಿನ ಗಣಿಗಾರಿಕೆ ಬಗ್ಗೆ ನಾವು ನಿಲುವಳಿ ಸೂಚನೆ ಮುಖೇನ ತಮ್ಮ ಗಮನವನ್ನು ಸೆಳೆಯುವುದಕ್ಕೆ ಪ್ರಯತ್ನಪಟ್ಟೆವು. ತಾವು ರಾಜ್ಯದ ದೃಷ್ಟಿಯಿಂದ ಮಹತ್ವವಾದ ವಿಚಾರವೆಂದು ಹೇಳಿ ಈಗಾಗಲೇ ರೂಲ್ 69ರ ಅಡಿಯಲ್ಲಿ ಚರ್ಚೆಗೆ ಅವಕಾಶವನ್ನು ಮಾಡಿಕೊಟ್ಟಿದ್ದೀರಿ.

**ಶ್ರೀ ಹೆಚ್.ಡಿ. ರೇವಣ್ಣ :-** ಇನ್ನರ್ಧ ಗಂಟೆ ಕಳೆದರೆ ರಾಹುಕಾಲ ಮುಗಿಯುತ್ತದೆ.